†ಶ್ರೀ ಆಲೂರು ಹನುಮಂತಪ್ಪ.—ಎಷ್ಟು ಅಂದಾಜುಗಳು ತಯಾರಾಗಿವೆ ಅವನ್ನು ತರಿಸಿ ಕೊಂಡು ವರ್ಷ ವರ್ಷವೂ ಎಷ್ಟು ಕೆಲಸ ಮಾಡಬಹುದೋ ಅಷ್ಟನ್ನೂ ಮಾಡುತ್ತಿದ್ದೇವೆ.

ಶ್ರೀ ಎಂ. ಎನ್. ರಾಮಣ್ಣ.—ಸ್ವಾಮಿ.....

Sri AZEEZ SAIT.—Sir, I rise to a point of order. One hour is over and the Question Hour is considered to be over. Now, you have to go to the regular business of the House.

Mr. DEPUTY SPEAKER.—I have no objection. Question Hour is over and I will take up Short Notice Question.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ನನ್ನ 245ನೇ ಪ್ರಶ್ನೆಯನ್ನು ತೆಗೆದುಕೊಳ್ಳಲಿಲ್ಲ. ಮಾನ್ಯ ಮಂತ್ರಿಗಳು ಈಗ ಬಂದಿದ್ದಾರೆ.

ಉಪಾಧ್ಯಕ್ಷರು.—ಆ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರೂಲ್ 311ರ ಪ್ರಕಾರ ನಾನು ಒಂದು ಕ್ರಿಯಾಲೋಪವನ್ನು ಎತ್ತಿದ್ದೇನೆ. ಏನೆಂದರೆ, ಈ ಮನೆಗೆ ಮಂತ್ರಿಗಳು ಅಧೀನರೋ ಅಥವಾ ನಾವೇ ಅವರಿಗೆ ಅಧೀನರೋ? ಮಾನ್ಯ ರಂಗನಾಥ್ ಅವರು ಪ್ರಶ್ನೆ ಕೇಳಿದಾಗ ಆರೋಗ್ಯ ಮಂತ್ರಿ ಗಳು ಇರಲಿಲ್ಲ.....

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಹೇಳುವುದರಲ್ಲಿ ಕ್ರಿಯಾಲೋಪವಿಲ್ಲ.

SHORT NOTICE QUESTION AND ANSWER

Purchase of the Palace of Travancore Maharaja by Government

17. Sri C. K. RAJAIAH SHETTY (Chiknayakanahalli).—

Will the Minister for Public Works be pleased to state :—

(*a*) whether the Palace of Travancore Maharaja at Bangalore has been purchased or proposed to be purchased by Government;

(*b*) if so, the cost of the same;

(*c*) the purpose for which it is proposed to be purchased ?

A.—Sri VEERENDRA PATIL (Minister for Public Works).—

(*a*) It is proposed to be purchased by Government.

(*b*) Rs. 18.00 lakhs.

(*c*) For locating some of the Government Offices presently functioning in rented buildings.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—18 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳಬೇಕೆಂದು ಉದ್ದೇಶಿ ಸಿರುವುದಾಗಿ ಹೇಳಿದ್ದಾರೆ. ನೇರವಾಗಿ ಸಂಬಂಧಪಟ್ಟ ವ್ಯಕ್ತಿಯ ಹತ್ತಿರ ವ್ಯವಹಾರ ಮಾಡು ತ್ತಿದ್ದೀರೋ ಅಥವಾ ಬ್ರೋಕರ್ ಮೂಲಕ ವ್ಯವಹಾರ ನಡೆಸುತ್ತಿದ್ದಾರೋ, ಸ್ವಾಮಿ ?

†ಶ್ರೀ ವೀರೇಂದ್ರ ಪಾಟೀಲ್.—ಯಾರು ಮನೆ ಮಾಲೀಕರಿದ್ದಾರೆ ಅವರ ಕೂಡ ನೆಗೋಷಿ ಯೇಟ್ ಮಾಡಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಅರಮನೆಯ ವಿಸ್ತೀರ್ಣವೆಷ್ಟು ?

ಶ್ರೀ ವೀರೇಂದ್ರ ಪಾಟೀಲ್.— ಸೈಟ್ ಏರಿಯಾ 2,19,190, ಚದುರ ಅಡಿಗಳು.

ಶ್ರೀ ಎಸ್. ಶಿವಪ್ಪ.—ಇಷ್ಟು ರೂಪಾಯಿಗಳನ್ನು ಕೊಟ್ಟು ಒಬ್ಬ ಮಹಾರಾಜರ ಅರಮನೆಯನ್ನು ಕೊಂಡುಕೊಳ್ಳುವುದಕ್ಕಿಂತ ಸರಕಾರದವರು ವಿಧಾನಸೌಧದ ಎದುರಿಗಿರುವ ಭೂಮಿಯಲ್ಲಿ ಕಡಮೆ ಬೆಲೆಯಲ್ಲಿ ಕಟ್ಟಡ ಕಟ್ಟಿಸಬಹುದಾಗಿತ್ತು, ಬೇರೆ ಜಾಗದಲ್ಲಿ ಕಟ್ಟಿಸಬಹುದಾಗಿತ್ತು. 18ಲಕ್ಷ ರೂಪಾಯಿ ಕೊಟ್ಟು ಈಗ ಅರಮನೆ ಕೊಳ್ಳುವುದು ಯಾರಿಗೋ ಸಹಾಯಮಾಡಿ ಕಮಿಷನ್ ಸಂಪಾದಿಸುವುದಕ್ಕಾಗಿ ಅಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ ನಾವು ಎಷ್ಟೋ ಕಟ್ಟಡಗಳನ್ನು ಇದುವರೆಗೆ ಕಟ್ಟಿಸಿದ್ದರೂ ಕೂಡ ಇನ್ನೂ ಸುಮಾರು 20 ಸರಕಾರಿ ಆಫೀಸುಗಳು ಖಾಸಗಿ ಕಟ್ಟಡಗಳಲ್ಲಿವೆ. ಅದಕ್ಕೆ 22,560 ರೂಪಾಯಿ ಬಾಡಿಗೆ ಕೊಡುತ್ತಿದ್ದೇವೆ. ಸರಕಾರಿ ಆಫೀಸುಗಳಿಗೆ ಬಹಳಷ್ಟು ಕಟ್ಟಡಗಳು ಬೇಕಾಗಿವೆ. ಎಲ್ಲಕ್ಕೂ ಕಟ್ಟಡಗಳನ್ನು ಕಟ್ಟಿಸುವುದಕ್ಕಾಗುವುದಿಲ್ಲ. ಒಳ್ಳೆಯ ಕಟ್ಟಡ ಸಿಕ್ಕುವ ಕಡೆ ಖರೀದಿ ಮಾಡಬೇಕಾಗುತ್ತದೆ.

ಶ್ರೀ ಎಸ್, ಶಿವಪ್ಪ.—ನಿಮಗೆ ಆಫೀಸುಗಳಿಗೆ ಬೇಕಾಗಿರುವಷ್ಟು ಜಾಗ ಈ ಅರಮನೆಯಲ್ಲಿ ಸಿಕ್ಕುತ್ತದೆಯೇ ? 18 ಲಕ್ಷ ಕೊಡುವಾಗ ನಿಮಗೆ ಎಷ್ಟು ಸ್ಥಳಾವಕಾಶ ದೊರೆಯುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—20 ಆಫೀಸುಗಳನ್ನೂ ಈಗ ತೆಗೆದುಕೊಳ್ಳಬೇಕೆಂದಿರುವ ಕಟ್ಟಡದಲ್ಲಿ ನಡೆಸುವುದಕ್ಕಾಗುವುದಿಲ್ಲ. ಬಾಡಿಗೆ ಕಟ್ಟಡಗಳಲ್ಲಿ ಕೆಲವು ಆಫೀಸುಗಳನ್ನು ನಡೆಸಲಾಗುತ್ತಿದೆ. ಒಂದೊಂದು ಕಟ್ಟಡಕ್ಕೆ ನಾವು 4—5 ಸಾವಿರ ರೂಪಾಯಿ ಬಾಡಿಗೆ ಕೊಡುತ್ತಿದ್ದೇವೆ. ಆದುದರಿಂದ ಈ ಕಟ್ಟಡವನ್ನು ತೆಗೆದುಕೊಂಡರೆ ಕೆಲವು ಆಫೀಸುಗಳಿಗೆ ಅನುಕೂಲವಾಗಬಹುದು ಎಂದು ವಿಚಾರಮಾಡಿ ತೆಗೆದುಕೊಳ್ಳಬೇಕೆಂದಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಈ ಕಟ್ಟಡದಲ್ಲಿ ಎಷ್ಟು ಆಫೀಸುಗಳನ್ನು ನಡೆಸಬೇಕೆಂದು ತೀರ್ಮಾನಮಾಡಲಾಗಿದೆ ? ಅದರಿಂದ ಉಳಿತಾಯವಾಗುವ ಬಾಡಿಗೆ ಎಷ್ಟು ? ಈ ಕಟ್ಟಡದ ವಯಸ್ಸೆಷ್ಟು ?

ಶ್ರೀ ವೀರೇಂದ್ರ ಪಾಟೀಲ್.—ಇದು ಒಳ್ಳೆಯಕಟ್ಟಡ ಕೆಲವು ಸದಸ್ಯರು ಇದನ್ನು ನೋಡಿರಬಹುದು. ಇದರಲ್ಲಿ ಯಾವ ಆಫೀಸುಗಳನ್ನು ಲೊಕೇಟ್ ಮಾಡಬೇಕೆಂಬುದನ್ನು ಇನ್ನೂ ನಿರ್ಧಾರ ಮಾಡಿಲ್ಲ. ಇನ್ನೂ ಕಟ್ಟಡ ತೆಗೆದುಕೊಂಡಿಲ್ಲ, ಪ್ರಪೋಸಲ್ ಇದೆ. ತೆಗೆದುಕೊಂಡಮೇಲೆ ನಮ್ಮ ಕಂಟ್ರೋಲಿಗೆ ಬಂದಮೇಲೆ ಯಾವ ಆಫೀಸುಗಳನ್ನು ಅಲ್ಲಿ ಲೊಕೇಟ್ ಮಾಡಬೇಕೆಂಬುದನ್ನು ನಿರ್ಧಾರಮಾಡುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆ ಕಳೆದ ಅಧಿವೇಶನದಲ್ಲಿ ಈ ಕಟ್ಟಡವನ್ನು ತೆಗೆದುಕೊಳ್ಳುತ್ತಾರೆಂಬ ವದಂತಿ ಇರುವುದು ನಿಜವೇ ಎಂಬ ಪ್ರಶ್ನೆ. ಈ ಸಭೆಯ ಮುಂದೆ ಬಂದಿತ್ತು ಜ್ಞಾಪಕ ವಿರಬಹುದು. ಈ ರೀತಿ ಅವ್ಯವಹಾರ ಮಾಡಬಾರದು, ಈ ರೀತಿ ಸಾರ್ವಜನಿಕ ಕಟ್ಟಡ ಬೇಕಾದರೆ ಅಡ್ವರ್ಟೈಜ್ ಮಾಡಿ ಬೆಂಗಳೂರಿನಲ್ಲಿ ಸರಕಾರಕ್ಕೆ ಇಷ್ಟು ಕಟ್ಟಡಗಳು ಬೇಕು ಇಷ್ಟು ಅವಶ್ಯಕತೆಯಿದೆ ಎಂದು ಕೇಳುವುದನ್ನು ಬಿಟ್ಟು ನಿಮ್ಮೊಳಗೇ ಮಾತನಾಡಿಕೊಂಡು ಈ ರೀತಿ ಜನರಿಗೆ ಅನುಮಾನ ಬರುವಹಾಗೆ ಮಾಡಬಾರದು ಎಂದು ಹೇಳಿದ್ದೇವೆ. ಆದುದರಿಂದ ಈ ಸಭೆಯಲ್ಲಿರುವ ಉದ್ವೇಗದ ಅಭಿಪ್ರಾಯವನ್ನು ತಿಳಿದು ಈಗಲಾದರೂ ಈ ಕಟ್ಟಡವನ್ನು ತೆಗೆದುಕೊಳ್ಳುವುದನ್ನು ಕೈಬಿಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ತೆಗೆದುಕೊಳ್ಳಬೇಡಿ ಅಂತ ಹೇಳಿದ ಕೂಡಲೇ ತೆಗೆದುಕೊಳ್ಳದೇ ಇರುವ ಹಾಗಿಲ್ಲ, ಅಥವಾ ತೆಗೆದುಕೊಳ್ಳಿ ಎಂದು ಹೇಳಿದ ಕೂಡಲೇ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಶ್ರೀಮಾನ್ ಸಿದ್ದವೀರಪ್ಪನವರು ಅಡ್ವರ್ಟೈಸ್ ಮಾಡಬೇಕೆಂದು ಹೇಳುತ್ತಾರೆ. ಯಾರು ಮಾರುತ್ತೀರಿ ಅಂತ ಕೇಳಿ, ಯಾವುದೋ ಮೂಲೆಯಿಲ್ಲರತಕ್ಕ ಬಿಲ್ಡಿಂಗನ್ನು ಆಫೀಸಿಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರಿ ಆಫೀಸುಗಳನ್ನು ನಡೆಸುವುದಕ್ಕೆ ಅನುಕೂಲವಾಗುವಂತಹ ಕಟ್ಟಡ ಜನರಿಗೆ ಅನುಕೂಲವಾಗುವಂತಹ ಕಟ್ಟಡ ಮತ್ತು ಈ ವಿಧಾನಸೌಧಕ್ಕೆ ಹತ್ತಿರವಾಗಿರುವಂತಹ ಕಟ್ಟಡ ನೋಡಿಕೊಂಡು ತೆಗೆದುಕೊಳ್ಳಬೇಕಾಗುತ್ತದೆ. ವಾರಂಟಿಕ್ಕೆ ಇದ್ದವರಿಗೆಲ್ಲಾ ಕೊಡುತ್ತೀರಾ ಅಂತ ಕೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈ ಮನೆ ವಾಸಕ್ಕೆ ಕಟ್ಟಿರುವ ಮನೆ, ಆಫೀಸಿಗೆ ಕಟ್ಟಿರತಕ್ಕದಲ್ಲ. ತಮಗೆ ಬೇಕಾದವರಿಗೆ ಸಹಾಯಮಾಡುವ ಉದ್ದಿಶ್ಯ, ಮತ್ತು ಇದರಲ್ಲಿ ಏನೋ ಒಂದು ವ್ಯವಹಾರ ಮಾಡುವ ಉದ್ದಿಶ್ಯ ಇಟ್ಟುಕೊಂಡು ಈ ಕೆಲಸ ಮಾಡುತ್ತಾ ಇದ್ದೀರಿ ಅಂತ ಈ ಸಭೆಯಲ್ಲಿ ಒಂದು

(ಶ್ರೀ ಎಚ್. ಸಿದ್ಧವೀರಪ್ಪ)

ಅಭಿಪ್ರಾಯ ಬಂದಿದೆ. ನಮ್ಮ ಕೈಯಲ್ಲಿ ಅಧಿಕಾರ ಇದೆ, ನಾವು ತೆಗೆದುಕೊಂಡೇ ತೀರುತ್ತೇವೆ ಎಂದು ಮನಸ್ಸು ಮಾಡಿದ್ದೀರಾ ? ಅಥವಾ ಜನರ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಯಾರಿಗೂ ಸಹಾಯ ಮಾಡುವಂತಹ ದೃಷ್ಟಿ ಇಲ್ಲ ಅಥವಾ ನಮಗೆ ಅವರು ಬೇಕಾದವರೂ ಅಲ್ಲ. ಅವರು ತಿರುವಾಂಕೂರು ಮಹಾರಾಜರು ಅಂತ ಕೇಳಿದ್ದೇನೆ, ಅವರಿಗೂ ನಮಗೂ ಏನೂ ನೆಂಟಸ್ತನ ಇಲ್ಲ, ನಮಗೆ ಬೇಕಾದವರೂ ಅಲ್ಲ ಮತ್ತು ಯಾವ ವ್ಯವಹಾರವೂ ನಡೆದಿಲ್ಲ. ಅವಶ್ಯಕತೆ ಕಂಡುಬಂದು ಈ ಕಟ್ಟಡ ಅನುಕೂಲವಾಗುತ್ತದೆ ಎಂದು ತಿಳಿದು ಕೊಂಡು ಈ ವ್ಯವಹಾರವನ್ನು ಮಾಡಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಬಿಲ್ಡಿಂಗ್‌ನ ಮಾಲೀಕರು ಈ ಬೆಂಗಳೂರಿನಲ್ಲಿರುವ ಅನೇಕ ಬ್ರೋಕರುಗಳಿಗೆ 14 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ರೆಡಿಯಾಗಿದ್ದೇನೆ ಎಂದು ತಿಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಗೊತ್ತಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಈ ಕಟ್ಟಡ ಎಷ್ಟು ಬಾಳುತ್ತದೆ ಎಂದು ಇಲಾಖೆಯವರನ್ನು ಕೇಳಿದ್ದೀರಾ ? ಕೇಳಿದ್ದರೆ 3 ಲಕ್ಷ ರೂಪಾಯಿ ಬಾಳುತ್ತದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆಯೇ ? ಇದು ಇರುವುದು 5 ಎಕರೆ ವಿಸ್ತೀರ್ಣ ಅಲ್ಲವೇ ? ಹಾಗಾದರೆ ಎಕರೆಗೆ 3 ಲಕ್ಷ ರೂಪಾಯಿ ಆದರೆ 15 ಲಕ್ಷ ರೂಪಾಯಿ ಆಗಲಿಲ್ಲವೇ ? ನಮ್ಮ ಮಹಾರಾಜರ ಜಮೀನನ್ನು 10 ಸಾವಿರದಿಂದ 15 ಸಾವಿರ ರೂಪಾಯಿಗಳವರೆಗೂ ನಿಮ್ಮ ಪಕ್ಷದವರೇ ಕೊಂಡುಕೊಂಡದ್ದು ನಿಜವಲ್ಲವೇ ! ಹಾಗಿದ್ದರೆ ಇದನ್ನು ಎಕರೆಗೆ 3 ಲಕ್ಷ ರೂಪಾಯಿನಂತೆ ಕೊಂಡುಕೊಳ್ಳುವುದರ ಔಚಿತ್ಯವೇನು ?

ಶ್ರೀ ವೀರೇಂದ್ರ ಪಾಟೀಲ್.—ನೆಗೋಷಿಯೇಟ್ ಮಾಡಿಯೇ ಅವರ ಕಡೆಯಿಂದ ತೆಗೆದು ಕೊಂಡಿದ್ದೇವೆ. ಇದರ ಉಪಯುಕ್ತತೆಯನ್ನೆಲ್ಲಾ ಪರಿಶೀಲನೆ ಮಾಡಿ ತೆಗೆದುಕೊಂಡಿದ್ದೇವೆ.

Mr. DEPUTY SPEAKER.—Short Notice Questions are over.

(Several members rose to put Supplementaries)

Mr. DEPUTY SPEAKER.—Order, order.

ಶ್ರೀ ವಾಟಾಳ್ ನಾಗರಾಜ್.—18 ಲಕ್ಷ ರೂಪಾಯಿಗಳಿಗೆ ಈ ಬಿಲ್ಡಿಂಗ್‌ನ್ನು ಖರೀದಿ ಮಾಡಿದರೆ ನಿಮ್ಮ ಕಾಂಗ್ರೆಸ್ ಆಫೀಸಿಗೆ ಒಂದು ಲಕ್ಷ ರೂಪಾಯಿ ಧನ ಸಹಾಯ ಕೊಡುತ್ತೇನೆ ಎಂದು ಅವರು ಹೇಳಿದ್ದಾರೆಯೇ ? ಅದು ನಿಜವಲ್ಲವೇ ?

Sri K. H. PATIL.—Sir, to show that Government is corrupt in this transaction we should be allowed to put more suplementaries. Otherwise, what is the use of our being here ? I have stood up several times to catch your eye but have failed to catch your eye. This palace orginally belonged to the Mysore Maharaja and from him the Travancore Maharaja bought it for Rs. 2 lakhs. They have constructed the building at a cost of Rs. 3 lakhs. Negotiation was going very recently for purchasing it for Rs. 13 or 14 lakhs through the Commission Agent Cariappa and the Government are now negotiating to purchase it for Rs. 18 lakhs. Therefore, we have every reason to doubt the bonafides of the Government. We want to know whethar the valuation has been made, whether correct assessment has been made and whether the Hon'ble Minister is prepared to constitute a Committee of this House to go into this matter before he finalises this matter and commits this State to such heavy expenditure.

Mr. DEPUTY SPEAKER.—I have already said that the question hour is over and the Short Notice question is over.

Sri K. H. PATIL.—The short notice question will come only after the question hour and the Chair has every discretion to allow greater scope for supplementaries.

Mr. DEPUTY SPEAKER.—I have allowed a number of supplementaries; we have spent nearly twenty minutes on this Short Notice Question and there is no need to spend more time on this.

Sri M. S. KRISHNAN.—Since this is a very important matter, the Chair may allow a few more supplementaries. This is a matter where Government funds are misused.

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಈ ವ್ಯವಹಾರದ ಬಗ್ಗೆ ಒಂದು ಚಾರ್ಜ್ ಮಾಡಿದ್ದಾರೆ, ಅದರ ಬಗ್ಗೆ ಹೇಳಬೇಕಾಗಿದೆ. 18 ಲಕ್ಷ ರೂಪಾಯಿ ಕೊಟ್ಟು ಈ ಬಿಲ್ಡಿಂಗ್ ಖರೀದಿ ಮಾಡಿದರೆ ಕಾಂಗ್ರೆಸ್ ಆಫೀಸಿಗೆ ಒಂದು ಲಕ್ಷ ರೂಪಾಯಿ ಸಹಾಯ ಧನ ಕೊಡುತ್ತೇವೆ ಎಂದು ತಿಳಿಸಿದರು ಆದ್ದರಿಂದ ಈ ಬಿಲ್ಡಿಂಗ್‌ನ್ನು ಖರೀದಿ ಮಾಡಿದ್ದಿರೇನು ಎಂದು ಕೇಳಿದರು. ಈ ರೀತಿ ಹೇಳುವುದಕ್ಕೆ ಏನೂ ಆಧಾರ ಇಲ್ಲ ಅವರು ಒಂದು ಪೈಸಾನೂ ಕೂಡ ಕೊಡುತ್ತೇವೆ ಅಂತ ಹೇಳಿಲ್ಲ, ಒಂದು ಪೈಸಾನೂ ಕೇಳಿಲ್ಲ, ಒಂದು ಪೈಸಾನೂ ಕೂಡ ಕಾಂಗ್ರೆಸ್ ಆಫೀಸಿಗೆ ಕೊಡುವಂತಹದು ಇಲ್ಲ.

ಶ್ರೀ ಎಸ್. ಚನ್ನಯ್ಯ.—ಈ ರೀತಿ ಮಾಡುವುದು ನ್ಯಾಯವಲ್ಲ. ಈ ರೀತಿ ಮಾಡಬೇಡಿ ಎಂದು ಹೇಳಿದರೆ ಸರಿಯಾಗಿ ಉತ್ತರ ಕೊಡಬೇಕು. 18 ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಬಿಲ್ಡಿಂಗ್‌ನ್ನು ತೆಗೆದುಕೊಳ್ಳುವುದಕ್ಕೆ ಕಾರಣವೇನು ? ಎಷ್ಟಕ್ಕೆ ನೆಗೋಷಿಯೇಟ್ ಮಾಡಿದ್ದೀರಿ ? 12 ಲಕ್ಷ ರೂಪಾಯಿಗೆ ಪೊದಲು ಕೇಳಿಲ್ಲವೇ ? 18 ಲಕ್ಷ ರೂಪಾಯಿಗಳನ್ನು ಕೊಟ್ಟು ತೆಗೆದುಕೊಳ್ಳುವುದಕ್ಕೆ ನಿಮಗೆ ಏನು ಅಧಿಕಾರ ಇದೆ ? ಸರ್ಕಾರವನ್ನು ಧೂಳಿಪಟ ಮಾಡುತ್ತೀರಾ ? ಕುಳಿತುಕೊಳ್ಳಿ ಅಂದರೆ, ಕುಳಿತುಕೊಳ್ಳುವುದಕ್ಕೆ ಅಲ್ಲ ನಾವು ಬಂದಿರುವುದು. ಈ ರೀತಿ ಎಲ್ಲಾ ಮಾತನಾಡಬಾರದು. ಆ ಅಧಿಕಾರ ಇರುವುದು ಅಧ್ಯಕ್ಷರಿಗೆ, ನಿಮಗೆ ಅಲ್ಲ. ನಮಗೆ ಬೇಕು ನಾವು ಈ ಬಿಲ್ಡಿಂಗ್‌ನ್ನು ತೆಗೆದು ಕೊಂಡಿದ್ದೇವೆ ಅನ್ನುವುದಕ್ಕಲ್ಲ ನೀವು ಇಲ್ಲರುವುದು. ಸರ್ಕಾರವನ್ನು ಹಾಳುಮಾಡುವುದಕ್ಕೆ ಬಂದಿದ್ದೀರಾ ಅಂತ ಕೇಳುತ್ತಾ ಇದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಪ್ರಶ್ನೆಹಾಕಿ ಕುಳಿತುಕೊಂಡ ಮೇಲೆ ಉತ್ತರ ಹೇಳಬೇಕು ಎಂದು ಪ್ರೊಸೀಜರ್ ಇರುವುದು, ಅದಕ್ಕೇ ಕುಳಿತುಕೊಂಡರೆ ಉತ್ತರ ಕೊಡುತ್ತೇನೆ ಎಂದು ಹೇಳಿದೆ, ಕುಳಿತುಕೊಳ್ಳಿ ಎಂದು ನಾನು ನಿಮಗೆ ಆಜ್ಞೆ ಮಾಡುತ್ತಿಲ್ಲ. ವಾಟಾಳ್ ನಾಗರಾಜ್‌ರವರು ಪ್ರಶ್ನೆ ಹಾಕಿದರು ಅದಕ್ಕೆ ಉತ್ತರ ಕೊಟ್ಟೆ.

LEAVE OF ABSENCE TO Sri R. M. DESAI AND Sri M. R. PATIL—GRANT OF

Mr. DEPUTY SPEAKER.—I have received a letter from Sri R. M. Desai, a member of this House, requesting for leave of absence from attending the current sittings of the House due to some private work. Is it the pleasure of the House that permission be granted to the hon'ble Member ?

HON'BLE MEMBERS.—Yes.

Mr. DEPUTY SPEAKER.—Leave of absence is granted.

I have also received a letter from Sri M. R. Patil, a member of this House, requesting for leave of absence from attending the current sitting of the House, due to ill health. Is it the pleasure of the House that permission be granted to the hon'ble Member ?